1-30 P.M.

ಶ್ರೀ ಬಿ. ಎಲ್. ಗೌಡ.—ಪ್ರವಾಹ ಬರುವ ಸಂದರ್ಭದಲ್ಲಿ ಕಷ್ಟನಷ್ಟಗಳಾಗುವುದನ್ನು ಮುಚ್ಚಿಡುತ್ತಾ ಏನೂ ಪರಿಹಾರ ಕೊಡದೇ ಇರುವ ಅಧಿಕಾರಿಗಳಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಅಧಿಕಾರಿಗಳು ನನ್ನಗಮನಕ್ಕೆ ಬಂದಿಲ್ಲ. ಅಲ್ಲದೆ ಹಾಗೆ ಅವರು ಮಾಡಲು ಅವರ ಕೈಯಿಂದೇನೂ ಕೊಡಬೇಕಾಗಿಲ್ಲ. ಆದರೆ ಇದರಲ್ಲಿ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಕೆಲವರಿಗೆ ನಿಜವಾಗಿಯೂ ನಷ್ಟವಾಗುತ್ತದೆ. ಮತ್ತೆ ಕೆಲವರು ಜೋಪಡಿ ಹಾಕಿಕೊಂಡಿರುತ್ತಾರೆ ಇವರಿಗೇನೂ ಹೆಚ್ಚು ನಷ್ಟವಾಗಿರುವುದಿಲ್ಲ. ಆದರೂ ರಾಭಪಡೆಯುತ್ತಾರೆ. ಆದಕಾರಣ ಎಲ್ಲವನ್ನೂ ಪರಿಶೀಲಿಸಿ ಕೊಡಬೇಕಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಹೊಳೆಯ ಪಕ್ಕದಲ್ಲೂ ಮನೆಗಳನ್ನು ಕಟ್ಟಿಸಿದರೆ ಪುನಃ ಮಳೆಬಂದರೆ ಅವರಿಗೆ ತೊಂದರೆಯಾಗುತ್ತದೆ; ಇದಕ್ಕೇನಾದರೂ ವವಸ್ಥೆ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಡುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಂಜನಗೂಡಿನಲ್ಲಿ 24,400 ರೂಪಾಯಿ ನಷ್ಟವಾಗಿದೆ, ಆದರೂ *ex-gratia* grant ಏನೂ ಕೊಟ್ಟಿಲ್ಲ; ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—2,020 ರೂಪಾಯಿ ನಗದು ಕೊಟ್ಟಿದ್ದಾರೆ, ಒಂದುಸಾವಿರ ಮುನಿಸಿಪಾಲಟಿಯವರು ಕೊಟ್ಟಿದ್ದಾರೆ, ಒಂದು ಸಾವಿರ ರೂಪಾಯಿ ಸಾರ್ವಜನಿಕರು ಕೊಟ್ಟಿದ್ದಾರೆ, ರೆಡ್‌ಕ್ರಾಸ್ ಸಂಸ್ಥೆಯವರುಕೂಡ ಸ್ವಲ್ಪ ಕೊಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರವಾಹ ಬಂದಾಗ ಮನೆಗಳು ಕೊಚ್ಚಿಕೊಂಡು ಹೋಗುತ್ತವೆಂದು ಹೇಳಿದರು, ಮಳೆ, ಬೆಂಕಿ ಅನಾಹುತ ಬಂದಾಗ ಅದಕ್ಕೆ ಹೆದರದೇ ಇರುವ ಮನೆಗಳನ್ನು ಸರ್ಕಾರ ಕಟ್ಟಿಸುತ್ತಾರೆಯೆ?

ಅಧ್ಯಕ್ಷರು.—ಬೆಂಕಿಯ ಪ್ರಶ್ನೆ ಇಲ್ಲಿ ಬರುವುದಿಲ್ಲ.—

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರವಾಹ ಬಂದರೆ ಹೆದರಬೇಯಿರುವ ಮನೆಗಳನ್ನು ಕಟ್ಟಲು ಪ್ರಯತ್ನ ಮಾಡುತ್ತಾರೆಯೆ?

ಅಧ್ಯಕ್ಷರು.—ನಿಮ್ಮ ಅಭಿಪ್ರಾಯವೇನು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ಲಾಸ್ಟಿಕ್ ಮನೆಗಳನ್ನು ಕಟ್ಟಬಹುದು.

Death of patients in Vani Vilas and Victoria Hospitals at the time of operation.

*Q.—582. Smt. NAGARATHNAMMA HIREMATH (Gandhinagar).—

Will the Government be pleased to state:—

whether they are aware of the deaths, if any, of patients in Vani Vilas and Victoria Hospitals due to tetanus at the time of operation?

*A.—Sri K. NAGAPPA ALVA (Minister for Health).—

No.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಇತ್ತೀಚೆಗೆ ನಿಮಗೆ ಬಂದ ವರದಿಯಲ್ಲಿ ಏನಾದರೂ ಎವರಪಿದ್ದರೆ ಹೇಳುತ್ತೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಟೆಟಾನಸ್ ರೋಗಕ್ಕೆ ಆಪರೇಷ್ಷ ಇಲ್ಲ. ಆದರೆ 12ಜನರಿಗೆ ಆಪರೇಷ್ಷ ಮಾಡಿದಮೇಲೆ ಟೆಟಾನಸ್ ರೋಗದ ಲಕ್ಷಣಗಳು ಕಂಡುಬಂತು. ಇದಕ್ಕೆ ಬೇಕಾದ ಚಿಕಿತ್ಸೆ ನಡೆಸಿದ್ದಾರೆ. ಮೂರು ಜನರು ಸತ್ತಿದ್ದಾರೆ.

ಶ್ರೀ ಜಿ. ವಿ. ಗೌಡ.—ಆಪರೇಷ್ಷ ಸಮಯದಲ್ಲಿ ಟೆಟಾನಸ್ ರೋಗದಿಂದ ಯಾರಾದರೂ ಸತ್ತಿದ್ದಾರೆಯೆ ಎಂದಿದೆ. ಆದರೆ ಇಲ್ಲಿ ಉತ್ತರ ಕೊಟ್ಟಿರುವುದು ಟೆಟಾನಸ್ ಆಪರೇಷ್ಷನಲ್ಲಿ ಯಾರೂ ಸತ್ತಿಲ್ಲ ಎಂದು.

ಶ್ರೀ ಕೆ. ನಾಗಪ್ಪ ಆಳ್ವ.—ಟೆಟಾನಸ್ ಬ್ಯಾಸಿಲ ಎಂಬ ಜರ್ಮ್ಸ್‌ನಿಂದ ಒಂದು ರೋಗ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೆಟಾನಸ್ ಎಂದರೇನು?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಒಂದುತರಹ germs ಮನುಷ್ಯನಿಗೆ ಎಲ್ಲಾದರೂ ಗಾಯವಾದರೆ ಅದರ ಮೂಲಕ ಈ ರೋಗ ತಗಲುತ್ತದೆ, ಯಾವ ಸಮಯದಲ್ಲಿ ಇದರ ಲಕ್ಷಣವುಂಟಾಗುತ್ತದೆ, ಈ ರೋಗದಿಂದ ಕೆಟ್ಟ ಪರಿಣಾಮವುಂಟಾಗುತ್ತದೆ ಎಂಬುದನ್ನು ಯಾರಿಗೂ ಹೇಳುವುದಕ್ಕೆ ಬರುವುದಿಲ್ಲ. ತನಿಖೆ ನಡೆಸಿದಮೇಲೆ ಆಪರೇಷ್ಷ ಅಜಾಗರೂಕತೆಯಿಂದ ಯಾವತಪ್ಪೂ ಆಗಲಲ್ಲವೆಂದು ಗೊತ್ತಾಗಿದೆ. ಇದರ ವಿಷಯದಲ್ಲಿ ಬೇಕಾಧ ಕಾರ್ಯಕ್ರಮ ತೆಗೆದು ಕೊಂಡಿದೆ. ಇನ್ನೂ ಇದಕ್ಕೆ ಬೇಕಾದ ಜಾಗರೂಕತೆ ತೆಗೆದುಕೊಳ್ಳಬೇಕೆಂಬ ಕಾರ್ಯಕ್ರಮವಿದೆ. ವಿಷಯವನ್ನು ಅವರಿಗೆ ತಿಳಿಸಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಒಂದು ಥಿಯೇಟರಿನಲ್ಲಿ ಟೆಟಾನಸ್ ಆಪರೇಷ್ಷ ಮಾಡಿದರೆ ಆ ಥಿಯೇಟರನ್ನು ಎಷ್ಟುದಿವಸ ಮುಚ್ಚಿರಬೇಕು?

ಶ್ರೀ ಕೆ. ನಾಗಪ್ಪ ಆಳ್ವ.—ಥಿಯೇಟರನ್ನು ಮುಚ್ಚಿಡ ಬೇಕಾಗಿಲ್ಲ. ಬೇಕಾದ ಜಾಗರೂಕತೆಯನ್ನು ತೆಗೆದು ಕೊಂಡು ಸ್ವಚ್ಛವಾಗಿಡಬೇಕು.

ಶ್ರೀ ಎ. ಕೃಷ್ಣಶೆಟ್ಟಿ.—ರ್ಯಾಬೊರೇಟರಿ ಕ್ರಮವನ್ನು ಏನಾದರೂ ಅನುಸರಿಸಬೇಕಾಗುತ್ತದೆಯೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದನ್ನೂ ಅನುಸರಿಸುತ್ತಿದ್ದೇವೆ.

Sri N. O. SAMAJI.—(Translated from Marathi) ಈ ರೋಗ ಸಂಪರ್ಕದಿಂದ ಹರಡುತ್ತದೆ, ಎಂದರೆ contagious ಇದು?

Sri K. NAGAPPA ALVA.—It is not contagious.

ಶ್ರೀ ಸಿ. ಆರ್. ರಂಗೇಗೌಡ.—ಮೈಸೂರು ರಾಜ್ಯದ ಆಸ್ಪತ್ರೆಗಳಲ್ಲಿ 'ಅನೀಸ್ತೀಸ್ಟ್'ಗಳು ಒಬ್ಬೊಬ್ಬರೇ ಇದ್ದಾರೆ, ಹೆಚ್ಚುಜನರಿಗೆ ಈ ಶಿಕ್ಷಣ ಕೊಡಲು ಪ್ರಯತ್ನಮಾಡುತ್ತೀರಾ?

Mr. SPEAKER.—Where is it? How does it come in this question? If the Hon'ble Minister for Health has an naswer, he may furnish it.

Sri K. NAGAPPA ALVA.—It is not within the question, Sir.

Sri GANJI VEERAPPA.—Carnor this be prevented by giving anti-tetanus injections prior to operation?

ಶ್ರೀ ನಾಗಪ್ಪ ಆಳ್ವ.—ಆಪರೇಷನ್ ಮಾಡುವುದಕ್ಕೆ ಮೊದಲು anti-tetanus injection ಕೊಡುವ ಕ್ರಮವಿಲ್ಲ.

Mr. SPEAKER.—Does the Hon'ble Member suggest that every person to be operated upon should be given an anti-tetanus injection ?

(*Laughter*)

ಶ್ರೀ ಕೆ. ದೇವಯ್ಯ.—ಈ ದಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೆಬ್ಬೆರಳು ಮೂಳೆ ಮುರಿದದ್ದಕ್ಕೆ ಏನೂ ಚಿಕಿತ್ಸೆಯಿಲ್ಲವೆಂದು ಹೇಳಿದರಂತೆ ಇದು ನಿಜವೆ ?

Mr. SPEAKER.—How does it arise out of this question? Do the cases that the Hon'ble member has in mind come under tetanus treatment ?

Sri K. DEVIAH.—It is a question pertaining to bones.

Mr. SPEAKER.—It does not arise out this question.

ಶ್ರೀ ಬಿ. ನಂಜಪ್ಪ.—ಕಟ್ಟಡಗಳ ಮೇಲೆ ಕೆಲಸ ಮಾಡುವಾಗ ಬಿದ್ದು ಗಾಯಗಳಾದರೆ, ಅಂತಹ ಗಾಯದಿಂದ ಈ ಟಿಟನಸ್ ರೋಗವೇನಾದರೂ ಬರುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಎಲ್ಲಿಂದ ಬರುತ್ತದೆ ಎನ್ನುವುದನ್ನು ಹೇಳಲಕ್ಕಾಗುವುದಿಲ್ಲ. ಸಾಧಾರಣವಾಗಿ ಕುದುರೆಗಳ ಮತ್ತು ದನಗಳ ನಗಣಿಯಿಂದ ಉದ್ಭವವಾದ ಕ್ರಿಮಿಗಳಿಂದ ಈ ರೋಗ ಬರುತ್ತದೆ.

ಶ್ರೀ ಜಿ. ಮಾದೇಗೌಡ.—ಟಿಟನಸ್ ರೋಗದಿಂದ ಕೆಲವರು ಸತ್ತರು ಎಂದು ಈಗ ಅಪ್ಪಣೆ ಕೊಡಿಸಿದರು. ಆದರೆ ಆಪರೇಷನ್ನಿಗೆ ಮೊದಲು ಟಿಟನಸ್ ರೋಗ ಇತ್ತೇ ಇಲ್ಲವೇಎನ್ನುವುದನ್ನು ಪರೀಕ್ಷೆ ಮಾಡುವುದಕ್ಕೆ ಅವಕಾಶವಿರಲಿಲ್ಲವೇ ?

ಶ್ರಿ ಕೆ. ನಾಗಪ್ಪ ಆಳ್ವ.—ಅದನ್ನೆಲ್ಲಾ ತನಿಖೆ ನಡೆಸಿಯೇ ಈ ವಿವರಗಳು ನಮಗೆ ಗೊತ್ತಾಗಿದ್ದುದು.

ಶ್ರೀ ವಿ. ಕೃಷ್ಣಶೆಟ್ಟಿ.—ಈ ಟಿಟನಸ್ ರೋಗ ಎನ್ನುವುದು ಕತ್ತೆ ಮತ್ತು ಕುದುರೆಗಳಿರುವೆಡೆಗಳಲ್ಲಿ ಹೆಚ್ಚಾಗಿರುತ್ತದೆ ಎನ್ನುವುದು ಸರಿಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಮುಖ್ಯವಾಗಿ ಕುದುರೆಗಳ ಮತ್ತು ದನಗಳ, ಎತ್ತುಗಳ ನಗಣಿಯಲ್ಲಿರುವ ಕ್ರಿಮಿಗಳಿಂದಾಗಿ ಹೆಚ್ಚಾಗಿ ಬೆಳೆಯುತ್ತದೆ ಎಂದು ತಿಳಿದು ಬರುತ್ತದೆ.

Sri M. R. PATIL.—Is it not a fact that tetanus germs exist in places of insanitary conditions ?

Sri K. NAGAPPA ALVA.—It is not correct, Sir. Insanitary condition has nothing to do with this. As I told before, Sir, these germs grow very well in wet areas where the soil gets mixed up with Cow dung or Horse dung.

Mr. SPEAKER.—It is not a general question on tetanus. Please read the question :

'Death of Patients in Vani Vilasa and Victoria Hospitals due to tetanus at the time of operation, The question is very clear.

Sri SANJEEVANATH AIKALA.—Is it not due directly to the operation done by non-sterilisation of the instruments used at the theatre ?

Sri K. NAGAPPA ALVA.—It has nothing to do with that.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ವಿಕ್ಟೋರಿಯ ಆಸ್ಪತ್ರೆಯಲ್ಲಿ ಆಪರೇಷನ್ನಾದ ಏಳೆಂಟು ದಿನಗಳ ಮೇಲೆ ಕೆಲವರು ಸತ್ತರು ಎನ್ನುವುದು ತಮ್ಮ ಗಮನಕ್ಕೆ ಬಂದಿರುವುದು ನಿಜವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹೌದು.

Extent of Betel Leaf Garden damaged due to the over-flowing of the Channel from Naganur Tank in Shiggavi, Dharwar District.

*Q.—628. Sri FAKIRAPPA TAVARE (Shiggaon).—

Will the Government be pleased to state :—

(*a*) the extent of betal-leaf garden damaged due to the over flowing of the channel from Naganur tank in Siggavi, Dharwar District, due to heavy rains last year ;

(*b*) the relief given to the ryots in this behalf ;

(*c*) whether it has come to their notice that ryots are put to great loss every year due to the overflow of the above said channel which has been badly damaged ;

(*d*) the action they intend to take in this behalf ?

A.—Sri ALUR HANUMANTHAPPA (Deputy Minister for Minor Irrigation).—

(*a*) A. G.
183 20.

(*b*) Loan of Rs.16,140 is sanctioned to the ryots.

(*c*) There were no such occasions excepting the one of last year.